<u>ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ,</u>
<u>ನವಲಗುಂದ.</u>

# Crl.Misc 131/2024

ಪಿ.ಡಬ್ಲೂ- 1

| | | |
|---|---|---|
| ಹೆಸರು | ಃ- ಶಾರದಾ ಮರೆಪ್ಪಗೌಡರ | |
| ಗಂಡನ ಹೆಸರು | ಃ- ದ್ಯಾಮಣ್ಣಗೌಡ | |
| ವಯಾ | ಃ- 74 ವರ್ಷ | |
| ಉದ್ಯೋಗ | ಃ- ಮನೆಕೆಲಸ | |
| ವಾಸಸ್ಥಳ | ಃ- ಗುಮ್ಮಗೋಳ | |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 10-09-2025 |

*<u>ಸಾಕ್ಷಿಯ ಪ್ರಮಾಣಿಕೃತ ಹೇಳಿಕೆ</u>*

1) ಎದುರುದಾರನು ನನ್ನ ಗಂಡನಾಗಬೇಕು. ನಮ್ಮ ವಿವಾಹವು 50 ವರ್ಷಗಳ ಹಿಂದೆ ಆಗಿರುತ್ತದೆ. ವಿವಾಹದ ಸಮಯದಲ್ಲಿ ಎದುರುದಾರನಿಗೆ ಬಂಗಾರ ಹಾಗೂ ಬೆಲೆಬಾಳುವ ವಸ್ತುಗಳನ್ನು ನೀಡಿರುತ್ತೇವೆ. ವಿವಾಹವು ನನ್ನ ತಂದೆ ತಾಯಿಯ ಮನೆಯಲ್ಲಿ ನಡೆದಿರುತ್ತದೆ. ವಿವಾಹದಿಂದ ನಮಗೆ ರತ್ನ ಹಾಗೂ ಸಂಗಮೇಶ ಮಕ್ಕಳು ಇರುತ್ತಾರೆ.

2) ನಮ್ಮ ವಿವಾಹದ ಸಮಯದಲ್ಲಿ ಎದುರುದಾರನು ಶಾಲೆಯಲ್ಲಿ ಶಿಕ್ಷಕನಾಗಿದ್ದು, ನಂತರದಲ್ಲಿ ಕಂದಾಯ ನಿರೀಕ್ಷಕರಾಗಿ ನಂತರದಲ್ಲಿ ತಹಶೀಲ್ದಾರರಾಗಿರುತ್ತಾರೆ. ಎದುರುದಾರರು ಸೇವೆಯಲ್ಲಿ ಇದ್ದ ಸಮಯದಲ್ಲಿ ಊರಿಗೆ ಹೋಗಿ ಬರುವುದು ಮಾಡುತ್ತಿದ್ದು, ಮಕ್ಕಳಾದ ನಂತರ ಮಾತನಾಡುವುದನ್ನು ಬಿಟ್ಟಿರುತ್ತಾರೆ. ನಾನು ಮತ್ತು ಮಗ ಕೂಡಿ ವಾಸ ಮಾಡುತ್ತಾ ಬಂದಿರುತ್ತೇವೆ ಮಗಳ ವಿವಾಹವಾಗಿರುತ್ತದೆ.

3) ಎದುರುದಾರನು ನಮ್ಮ ಸಂಗಡ ಯಾವುದೇ ಸಂಪರ್ಕವನ್ನು ಇಟ್ಟುಕೊಂಡಿಲ್ಲ. ನಾನು ಎದುರುದಾರನ ತಂದೆ ತಾಯಿಯ ಸಂಗಡ ಜೀವನ ಸಾಗಿಸಿ ಹೊಲಕ್ಕೆ ಹೋಗಿ ಬರುವುದು ಮಾಡುತ್ತಾ ಬಂದಿರುತ್ತೇನೆ. ನಂತರದಲ್ಲಿ ಎದುರುದಾರನು 2 ನೇ ವಿವಾಹ ಮಾಡಿಕೊಂಡ ಬಗ್ಗೆ ನನಗೆ ತಿಳಿದು ಬಂದಿರುತ್ತದೆ. ಅವರಿಗೆ ಮಕ್ಕಳು ಹುಟ್ಟಿದ ಬಗ್ಗೆ ಗೊತ್ತಿಲ್ಲ.

4) ಎದುರುದಾರನಿಗೆ ಬ್ಯಾಳಾಳದಲ್ಲಿ 4 ಕೂರ್ಗಿ ಹೊಲ, 01 ಧಾರವಾಡದಲ್ಲಿ ಮನೆ ಮತ್ತು ಆಸ್ತಿಗಳು ಮಾಡಿರುತ್ತಾನೆ ನನಗೆ ತಿಳಿಸಿರುವುದಿಲ್ಲ. ನನ್ನ ಜೀವನ ನಿರ್ವಹಣೆಗೆ ಇಲ್ಲಿಯವರಿಗೆ ಎದುರುದಾರನು ಯಾವುದೇ ಜೀವನಾಂಶ ನೀಡಿಲ್ಲ. ನನಗೆ ಯಾವುದೇ ವೈದ್ಯಕೀಯ ಚಿಕಿತ್ಸೆ ಮಕ್ಕಳಿಗೆ ಯಾವುದೇ ಖರ್ಚು ವೆಚ್ಚ ನೀಡದೆ ಬಂದಿರುತ್ತಾನೆ.

5) ನನಗೆ ಸಕ್ಕರೆ ಖಾಯಿಲೆ, ರಕ್ತದೊತ್ತಡ ವಯೊಸಾಮಾನ್ಯ ಅನಾರೋಗ್ಯವಿದ್ದು, ಓಡಾಡಲು ಆಗುವುದಿಲ್ಲ. ನನಗೆ ತಿಂಗಳಿಗೆ 20 ರಿಂದ 30 ಸಾವಿರ ರೂಪಾಯಿ ಖರ್ಚು ವೆಚ್ಚವಿದ್ದು ನನಗೆ ಯಾವುದೇ ಆದಾಯವಿಲ್ಲದೇ ನಾನು ಚಿಕಿತ್ಸೆ ಪಡೆದುಕೊಂಡಿಲ್ಲ. ನನಗೆ ಜೀವನ ನಿರ್ವಹಣೆಗೆ ಯಾವುದೇ ಮೂಲ ಇರುವುದಿಲ್ಲ. ಎದುರುದಾರನು ಸಾಕಷ್ಟು ಆದಾಯದ ಮೂಲ ಹೊಂದಿದ್ದು ಆತನಿಗೆ ಜೀವನಾಂಶ ನೀಡಲು ಸಾಮರ್ಥ್ಯತೆ ಇರುತ್ತದೆ ಆದರೂ ಸಹ ಜೀವನಾಂಶ ನೀಡಿರುವುದಿಲ್ಲ. ಆದಕಾರಣ ನನಗೆ ತಿಂಗಳಿಗೆ 50 ಸಾವಿರ ರೂಪಾಯಿ ಜೀವನಾಂಶದ ಅವಶ್ಯಕತೆ ಇರುತ್ತದೆ.

ನಾನು ಸಲ್ಲಿಸಿದ ನನ್ನ Assets and Liabilities ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯ ಭಾಗವೆಂದು ಪರಿಗಣಿಸಬೇಕೆಂದು ವಿನಂತಿ.

ಮುಂದುವರೆದ ಸಾಕ್ಷಿಯ ಹೇಳಿಕೆಗೆ ಸಮಯವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**
**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**